ಕರ್ನಾಟಕ ಸರ್ಕಾರ

## ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2014–15 : ದಿನಾಂಕ: 17–1–2015

## ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1 | 27 ನೇ ಕರ್ನಾಟಕ ರಾಜ್ಯ ಸ್ಕೌಟ್ಸ್–ಗೈಡ್ಸ್ ಜಾಂಬೋರೇಟ್ ಉದ್ಘಾಟನಾ ಸಮಾರಂಭ:<br>ಉದ್ಘಾಟನೆ:<br>ಶ್ರೀ ವಾಜುಭಾಯಿ ರೂಡಾಭಾಯಿ ವಾಲಾ<br>ರಾಜ್ಯಪಾಲರು ಕರ್ನಾಟಕ<br>ಮುಖ್ಯ ಅತಿಥಿಗಳು:<br>ಶ್ರೀ ಡಿ. ಕೆ. ಶಿವಕುಮಾರ್,<br>ಇಂಧನ ಸಚಿವರು | 18–1–2015<br>ಭಾನುವಾರ<br>ಬೆಳಗ್ಗೆ 9–30 ಗಂಟೆಗೆ | ಡಾ: ಅನಿಬೆಸೆಂಟ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ತರಬೇತಿ ಶಿಬಿರ ಕೇಂದ್ರ, ದೊಡ್ಡಬಳ್ಳಾಪುರ<br>ಬೆಂಗಳೂರು ಗ್ರಾಮಾಂತರ ಜಿಲ್ಲೆ<br>ವಾಹನ ವ್ಯವಸ್ಥೆ:<br>ಬೆಳಗ್ಗೆ 7–45 ಗಂಟೆಗೆ ಬೆಂಗಳೂರು ವಾರ್ತಾ ಸೌಧದಿಂದ |
| 2 | ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪ್ರದಾನ ಸಮಾರಂಭ:<br>ಪ್ರಶಸ್ತಿ ಪ್ರದಾನ:<br>ಶ್ರೀ ಸಿದ್ಧರಾಮಯ್ಯ,<br>ಮುಖ್ಯಮಂತ್ರಿಗಳು, ಕರ್ನಾಟಕ<br>ಮುಖ್ಯ ಅತಿಥಿಗಳು:<br>ಶ್ರೀಮತಿ ಉಮಾಶ್ರೀ,<br>ಕನ್ನಡ ಮತ್ತು ಸಂಸ್ಕೃತಿ ಖಾತೆ ಸಚಿವರು | 18–1–2015<br>ಭಾನುವಾರ<br>ಸಂಜೆ 4–30 ಗಂಟೆಗೆ | ಸಂಸ ಬಯಲು ರಂಗ ಮಂದಿರ<br>(ರವೀಂದ್ರ ಕಲಾಕ್ಷೇತ್ರ)<br>ಬೆಂಗಳೂರು |

ನಿರ್ದೇಶಕರ ಪರವಾಗಿ

# ಪತ್ರಿಕಾ ಪ್ರಕಟಣೆ

## ವಾರ್ತಾ ಸಚಿವರಿಂದ ಚನ್ನಪಟ್ಟಣ ಗೊಂಬೆಗಳ ಕ್ಯಾಲೆಂಡರ್ ಬಿಡುಗಡೆ

**ಬೆಂಗಳೂರು, ಜ. 17 (ಕರ್ನಾಟಕ ವಾರ್ತೆ) -**

ದೆಹಲಿಯಲ್ಲಿ ನಡೆಯಲಿರುವ 2015ರ ಗಣರಾಜ್ಯೋತ್ಸವದ ಪಥಸಂಚಲನದ ಸ್ಥಭ್ಧಚಿತ್ರಕ್ಕಾಗಿ ಚನ್ನಪಟ್ಟಣದ ಗೊಂಬೆಗಳು ರಾಜ್ಯದಿಂದ ಆಯ್ಕೆಯಾಗಿರುವ ಹಿನ್ನೆಲೆಯಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಚನ್ನಪಟ್ಟಣದ ಗೊಂಬೆಗಳ ಕ್ಯಾಲೆಂಡರ್ ಅನ್ನು ಹೊರ ತಂದಿದ್ದು ಮೂಲಸೌಲಭ್ಯ ಅಭಿವೃದ್ಧಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಹಾಗೂ ಹಜ್ ಸಚಿವ ಆರ್. ರೋಷನ್ ಬೇಗ್ ಅವರು ಇಂದು ತಮ್ಮ ಕಚೇರಿಯಲ್ಲಿ ಬಿಡುಗಡೆ ಮಾಡಿದರು.

ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ದೆಹಲಿಯ ಗಣರಾಜ್ಯೋತ್ಸವದ ಪಥಸಂಚಲನದಲ್ಲಿ ಸ್ತಬ್ಧಚಿತ್ರದೊಂದಿಗೆ ಪಾಲ್ಗೊಳಲಿದೆ. ಸ್ತಬ್ಧಚಿತ್ರದ ವಿಷಯದ ಆಯ್ಕೆ, ವಿನ್ಯಾಸ, ಕೇಂದ್ರದಲ್ಲಿ ಅದರ ಅನುಮೋದನೆ, ನಿರ್ಮಾಣ, ಪಾಲ್ಗೊಳ್ಳುವಿಕೆ ಹೀಗೆ ಎಲ್ಲಾ ಹಂತಗಳಲ್ಲೂ ವಾರ್ತಾ ಇಲಾಖೆಯೇ ಸಕ್ರಿಯವಾಗಿ ಪಾಲ್ಗೊಳ್ಳುತ್ತದೆ. ಇಲಾಖೆಯು ಕಳೆದ 2011 ರಿಂದ ಸತತವಾಗಿ ಐದು ಬಾರಿ ರಾಜ್ಯವನ್ನು ಪತ್ರಿನಿಧಿಸುತ್ತಿದೆ. ಇದಕ್ಕಾಗಿ ವಾರ್ತಾ ಇಲಾಖೆಯನ್ನು ಅಭಿನಂದಿಸುತ್ತೇನೆಂದು ಸಚಿವರು ತಿಳಿಸಿದರು.

ಹಿಂದೆ ಎಲ್ಲಾ ರಾಜ್ಯಗಳಿಗೂ ಪಥಸಂಚಲನದಲ್ಲಿ ಭಾಗವಹಿಸಲು ಅವಕಾಶವಿತ್ತು. ಭದ್ರತೆ ಮತ್ತು ಗಣರಾಜ್ಯೋತ್ಸವದ ಅವಧಿಯಲ್ಲಿ ಮಾಡಿದ ಇಳಿಕೆಯಿಂದಾಗಿ ಸ್ತಬ್ಧಚಿತ್ರಕ್ಕಾಗಿ ಪ್ರತಿನಿಧಿಸುವ ರಾಜ್ಯಗಳ ಸಂಖ್ಯೆಯನ್ನು 14ಕ್ಕೆ ಇಳಿಸಲಾಗಿದೆ. ಇದು ತೀವ್ರ ಪೈಪೋಟಿಗೆ ಕಾರಣವಾಗಿದೆ. ಅಷ್ಟೇ ಅಲ್ಲದೆ ಗುಣಮಟ್ಟಕ್ಕೆ, ವಿನ್ಯಾಸಕ್ಕೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ. ಸ್ತಬ್ಧಚಿತ್ರಕ್ಕಾಗಿ ಪ್ರಶಸ್ತಿ ಪಡೆದುಕೊಳ್ಳುವುದಕ್ಕಿಂತಲೂ ಪಥಸಂಚಲನದಲ್ಲಿ ಭಾಗವಹಿಸುವುದೇ ಪ್ರತಿಷ್ಠೆಯ ಸಂಕೇತವಾಗಿದೆ. ಇಂತಹ ಕಠಿಣ ಪರೀಕ್ಷೆಯಲ್ಲಿ ಕರ್ನಾಟಕವು ಸತತವಾಗಿ ಐದನೇ ಬಾರಿಗೆ ಆಯ್ಕೆಯಾಗಿದೆ ಎನ್ನುವುದು ಹೆಮ್ಮೆಯ ಸಂಗತಿ ಎಂದು ಅವರು ತಿಳಿಸಿದರು.

2014ರಲ್ಲಿ 'ಅಪ್ರತಿಮ ಹೋರಾಟಗಾರ ಟಿಪ್ಪು ಸುಲ್ತಾನ್' ಸ್ತಬ್ಧಚಿತ್ರದೊಂದಿಗೆ ರಾಜ್ಯವು ಭಾಗವಹಿಸಿತ್ತು. 2013ರಲ್ಲಿ 'ಕಿನ್ನಾಳ ಕಲೆಯ ಸ್ತಬ್ಧಚಿತ್ರ ಪ್ರದರ್ಶನಗೊಂಡಿತ್ತು. 2012ರ ಗಣರಾಜ್ಯೋತ್ಸವದಲ್ಲಿ ದಕ್ಷಿಣ ಕನ್ನಡ 'ಭೂತಾರಾಧನೆ'ಯ ಸ್ತಬ್ಧಚಿತ್ರಕ್ಕೆ ತೃತೀಯ ಪ್ರಶಸ್ತಿ ದೊರೆತಿತ್ತು. 2011ರಲ್ಲಿ ಬೀದರ್‌ನ ಪಾರಂಪರಿಕ ಕಲೆಯಾದ 'ಬಿದರಿ' ಸ್ತಬ್ಧಚಿತ್ರಕ್ಕೆ ದ್ವಿತೀಯ ಪ್ರಶಸ್ತಿ ದೊರೆತಿತ್ತು.

2006ರಲ್ಲಿ ಕರ್ನಾಟಕದಲ್ಲಿ ನಡೆಯಲಿದ್ದ ವೈರಾಗ್ಯ ಮೂರ್ತಿ ಬಾಹುಬಲಿಯ ಮಹಾಮಸ್ತಕಾಭಿಷೇಕದ ಸ್ತಬ್ಧ ಚಿತ್ರಕ್ಕೆ ಪ್ರಥಮ ಪ್ರಶಸ್ತಿ ದೊರೆತಿತ್ತು. 2008ರಲ್ಲಿ ಹೊಯ್ಸಳ ಕಲೆಯ ಸ್ಥಬ್ತಚಿತ್ರವು ದ್ವಿತೀಯ ಪ್ರಶಸ್ತಿಯನ್ನು ಪಡೆದುಕೊಂಡಿತ್ತು. ಅಲ್ಲದೆ, ಇದಕ್ಕಾಗಿ ಅತ್ಯುತ್ತಮ ನಿರೂಪಣೆ ಮತ್ತು ಅತ್ಯುತ್ತಮ ಫ್ಯಾಬ್ರಿಕೇಷನ್‌ಗಾಗಿ ಪ್ರಶಸ್ತಿ

ಪಡೆದುಕೊಂಡಿತ್ತು. ಒಂದೇ ಸ್ಥಬ್ತಚಿತ್ರಕ್ಕಾಗಿ ಮೂರು ಪ್ರಶಸ್ತಿಗಳನ್ನು ಪಡೆದಂತಹ ಅಪರೂಪದ ಸಾಧನೆಯನ್ನು ನಮ್ಮ ರಾಜ್ಯವು ಮಾಡಿದೆ.

ನಾಡಿನ ಪಾರಂಪರಿಕ ಕಲೆಗಳಲ್ಲಿ ಒಂದಾಗಿರುವ ಚನ್ನಪಟ್ಟಣದ ಗೊಂಬೆಗಳು ಮತ್ತು ಕನ್ನಡ ಸಂಗೀತಗಳೆರಡೂ ನೋಡುಗರ ಕಣ್-ಮನ ಸೆಳೆಯಲಿದ್ದರೆ, ಕಿವಿಗಳಿಗೆ ಇಂಪೆನಿಸಲಿವೆ. ನೋಡಲು ಆಕರ್ಷಕ ಬಣ್ಣಗಗಳಲ್ಲಿ ರಾರಾಜಿಸುವ ಚನ್ನಪಟ್ಟಣದ ಗೊಂಬೆಗಳು ಮೊದಲ ನೋಟದಲ್ಲೇ ಎಂತಹವರ ಮನವನ್ನೂ ಸೆಳೆಯುವಂತಿವೆ. ಅಲ್ಲದೆ, ಮಕ್ಕಳ ಧ್ವನಿಯಲ್ಲಿರುವ ಹಿನ್ನಲೆ ಸಂಗೀತ ಕೇಳುಗರಲ್ಲಿ ಪುಳಕ ಮೂಡಿಸಲಿವೆ.

ಭಾರತದ ಪ್ರಧಾನ ಮಂತ್ರಿಯಾಗಿ ನರೇಂದ್ರ ಮೋದಿ ಅವರಂತೆ ಅಮೆರಿಕದ ಅಧ್ಯಕ್ಷರಾಗಿ ಬರಾಕ್ ಒಬಾಮಾ ಅವರು ಮೊದಲ ಬಾರಿ ಗಣರಾಜ್ಯೋತ್ಸವಕ್ಕೆ ಪ್ರತ್ಯಕ್ಷ ಸಾಕ್ಷಿಯಾಗಲಿದ್ದಾರೆ. ಈ ಬಾರಿ ಒಬಾಮ ವಿಶೇಷ ಆಹ್ವಾನಿತರಾಗಿರುವ ಹಿನ್ನೆಲೆಯಲ್ಲಿ ಸ್ತಬ್ಧಚಿತ್ರದ ಆಯ್ಕೆಗೆ ಹೆಚ್ಚಿನ ಮಹತ್ವ ನೀಡಲಾಗಿತ್ತು. ಅಂತರರಾಷ್ಟ್ರೀಯ ಮಟ್ಟಕ್ಕೆ ಅನುಗುಣವಾಗಿ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳಬೇಕಾಗಿತ್ತು. ಹೀಗಾಗಿ, ಚನ್ನಪಟ್ಟಣದ ಗೊಂಬೆಗಳು, ಕೊಡುಗು; ಕಾಫಿಯ ನಾಡು, ಸಕಾಲ, ಸಾವಿರ ಕಂಬದ ಬಸದಿ, 18ನೇ ಶತಮಾನದ ಮೈಸೂರು ದಸರಾ ಆಚರಣೆಯಂತಹ ಐದು ವಿಷಯಗಳನ್ನು ಆಯ್ಕೆ ಮಾಡಿಕಳುಹಿಸಲಾಗಿತ್ತು. ಇದರಲ್ಲಿ ಆಯ್ಕೆಯಾಗಿದ್ದು ಚನ್ನಪಟ್ಟದ ಗೊಂಬೆಗಳು.

ಅಂತರರಾಷ್ಟ್ರೀಯ ಖ್ಯಾತಿಯ ಕಲಾನಿರ್ದೇಶಕ ಶಶಿಧರ ಅಡಪ ಅವರು ಸ್ಥಬ್ಧಚಿತ್ರ ವಿನ್ಯಾಸ ಮಾಡಿಕೊಟ್ಟರೆ, ಖ್ಯಾತ ಸಂಗೀತ ನಿರ್ದೇಶಕ ಪ್ರವೀಣ್ ಡಿ. ರಾವ್ ಅವರು ಸಂಗೀತ ನಿರ್ದೇಶನ ನೀಡಿದ್ದಾರೆ.

ರಾಮನಗರ ಜಿಲ್ಲೆಯಲ್ಲಿರುವ ಚನ್ನಪಟ್ಟಣ ಎಂದ ಕೂಡಲೇ ನೆನಪಾಗುವುದು ಬಣ್ಣ ಬಣ್ಣದ ಗೊಂಬೆಗಳು. ಆಕರ್ಷಕ ಬಣ್ಣ, ವಿಶಿಷ್ಟ ಕೆತ್ತನೆ ಮತ್ತು ವಿನ್ಯಾಸಗಳಿಂದ ಹೆಸರು ಮಾಡಿದೆ. ಇಲ್ಲಿನ ಗೊಂಬೆಗಳು ಚನ್ನಪಟ್ಟಣ ಎನ್ನುವ 'ಬ್ರಾಂಡ್‌ನೇಮ್'ನಲ್ಲಿ ಜಗದ್ವಿಖ್ಯಾತಿ ಪಡೆದಿವೆ. ದೊಡ್ಡವರು – ಚಿಕ್ಕವರು ಎನ್ನದೆ ಎಲ್ಲರನ್ನೂ ಆಕರ್ಷಿಸುವ ಚನ್ನಪಟ್ಟಣ ಗೊಂಬೆಗಳಿಗೆ ದೇಶ-ವಿದೇಶಗಳಲ್ಲೂ ಬೇಡಿಕೆ ಇದೆ. ಆಲೆ ಮರಗಳಿಂದ ಸಿದ್ಧಪಡಿಸಲಾಗುವ ಈ ಗೊಂಬೆಗಳು ಇಂಗ್ಲೆಂಡ್, ಅಮೆರಿಕ, ಜಪಾನ್, ಜರ್ಮನಿ, ಫ್ರಾನ್ಸ್, ಶ್ರೀಲಂಕಾ, ಸಿಂಗಾಪುರ, ಮಲೇಷಿಯಾ ಸೇರಿದಂತೆ ಹಲವು ದೇಶಗಳಿಗೆ ರಫ್ತಾಗುತ್ತವೆ.

ಬಣ್ಣದ ಬುಗುರಿ, ವಿಶ್ವ ಪ್ರಸಿದ್ಧ ರೈಲು. ದಿಬ್ಬಣ, ಬ್ಯಾಂಡ್ ಸೆಟ್, ದಸರಾ ಬೊಂಬೆ, ದೇವರ ಗೋಪುರ, ಪ್ರಾಣಿ-ಪಕ್ಷಿಗಳು, ಜೀಕುವ ಕುದುರೆ, ಎತ್ತಿನ ಗಾಡಿ, ನರ್ತಿಸುವ ಮಕ್ಕಳ ಬೊಂಬೆ, ತಿರುಗುವ ಬೊಂಬೆಗಳು, ಕೀ ಬಂಚ್, ಬಳೆ ಸೇರಿದಂತೆ ಹಲವಾರು ವಸ್ತುಗಳು ಇಲ್ಲಿ ತಯಾರಾಗುತ್ತವೆ. ಸ್ತಬ್ಧಚಿತ್ರದಲ್ಲೂ ಇವುಗಳೇ ಪ್ರಧಾನವಾಗಿ ಕಾಣಿಸಿಕೊಳ್ಳುತ್ತವೆ.

ಸ್ತಬ್ಧಚಿತ್ರದ ಮುಂಭಾಗದಲ್ಲಿ ಗೊಂಬೆಗಳನ್ನು ತಯಾರಿಸುವಲ್ಲಿ ಮಗ್ನರಾಗಿರುವ ದಂಪತಿಗಳು ಪ್ರಮುಖವಾಗಿ ಕಾಣಿಸಿಕೊಂಡರೆ ಎರಡನೇ ಹಂತದಲ್ಲಿ ಜೀಕುವ ಕುದುರೆ ಮೇಲೆ ತೂಗತ್ತಿರುವ ಹೆಣ್ಣು ಮಗು ಗಮನ ಸೆಳೆಯಲಿದೆ. ಮಧ್ಯಭಾಗದಲ್ಲಿ ತಿರುಗುವ ಗೊಂಬೆಗಳು ಇದ್ದರೆ ಕೊನೆಯಲ್ಲಿ ಜೋಡಿ ಕುದುರೆ ಮೇಲೆ ಸವಾರಿ ಮಾಡುತ್ತಿರುವವರು ಕಂಗೊಳಿಸಲಿದ್ದಾರೆ. ಕೆಳಭಾಗದಲ್ಲಿ ಪ್ರಾಣಿ ಪಕ್ಷಿಗಳು, ಬ್ಯಾಂಡ್ಸ್, ದಿಬ್ಬಣ, ಮಣಿಗಳಿಂದ

ಕೂಡಿರುವ ಸ್ಲೇಟ್ ಇರಲಿವೆ. ಸ್ತಬ್ಧಚಿತ್ರದಲ್ಲಿ ತಲಾ ನಾಲ್ಕು ಜನ ಹೆಣ್ಣು ಮತ್ತು ಗಂಡು ಮಕ್ಕಳು ಚನ್ನಪಟ್ಟಣದ ಗೊಂಬೆಗಳನ್ನು ಕೈನಲ್ಲಿ ಎಳೆದುಕೊಂಡು ಹೋಗಲಿದ್ದಾರೆ.

ರಾಜ್ಯದಿಂದ ಪಾಲ್ಗೊಳ್ಳುತ್ತಿರುವ ಈ ಬಾರಿಯ ಸ್ಥಬ್ದಚಿತ್ರಕ್ಕೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಚಾರ ದೊರೆಯಲಿದೆ. ಹಾಗೆಯೇ, ಈ ಸ್ತಬ್ಧಚಿತ್ರವನ್ನು ಅಂತರರಾಷ್ಟ್ರೀಯ ಮಟ್ಟಕ್ಕೆ ಅನುಗುಣವಾಗಿ ಸಿದ್ಧಪಡಿಸಲಾಗಿದೆ.

ಛಾಯಾಚಿತ್ರ ಶೀರ್ಷಿಕೆ:

**ಚನ್ನಪಟ್ಟಣದ ಗೊಂಬೆಗಳು ದೆಹಲಿಯಲ್ಲಿ ನಡೆಯಲಿರುವ 2015ರ ಗಣರಾಜ್ಯೋತ್ಸವದ ಪಥಸಂಚಲನದ ಸ್ಥಬ್ಧಚಿತ್ರಕ್ಕಾಗಿ ರಾಜ್ಯದಿಂದ ಆಯ್ಕೆಯಾಗಿದೆ. ಈ ಹಿನ್ನೆಲೆಯಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಹೊರತಂದಿರುವ ಚನ್ನಪಟ್ಟಣದ ಗೊಂಬೆಗಳ ಕ್ಯಾಲೆಂಡರ್ ಅನ್ನು ಮೂಲಸೌಲಭ್ಯ ಅಭಿವೃದ್ಧಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಹಾಗೂ ಹಜ್ ಸಚಿವ ಆರ್. ರೋಷನ್ ಬೇಗ್ ಅವರು ಶನಿವಾರ ಬೆಂಗಳೂರಿನಲ್ಲಿ ಬಿಡುಗಡೆ ಮಾಡಿದರು. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ನಿರ್ದೇಶಕ ಎನ್. ಆರ್. ವಿಶುಕುಮಾರ್ ಮತ್ತು ಸಚಿವರ ಆಪ್ತಕಾರ್ಯದರ್ಶಿ ಇಜಾಜ್ ಅಹಮದ್ ಅವರು ಚಿತ್ರದಲ್ಲಿದ್ದಾರೆ.**

## ರಾಜೀವ್ ಆರೋಗ್ಯ ಭಾಗ್ಯ/ಜ್ಯೋತಿ ಸಂಜೀವಿನಿ ಕಾರ್ಯಕ್ರಮಕ್ಕೆ ಜನವರಿ 20 ರಂದು ಚಾಲನೆ

**ಬೆಂಗಳೂರು, ಜನವರಿ 17 (ಕರ್ನಾಟಕ ವಾರ್ತೆ)**

ರಾಜೀವ್ ಆರೋಗ್ಯ ಭಾಗ್ಯ ಹಾಗೂ ಜ್ಯೋತಿ ಸಂಜೀವಿನಿ ಯೋಜನೆಗಳಿಗೆ ಜನವರಿ 20 ರಂದು ಮುಖ್ಯಮಂತ್ರಿ ಶ್ರೀ ಸಿದ್ಧರಾಮಯ್ಯನವರು ಚಾಲನೆ ನೀಡಲಿದ್ದಾರೆಂದು ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಶ್ರೀ ಯು.ಟಿ. ಖಾದರ್ ಅವರು ಇಂದು ಪತ್ರಕರ್ತರಿಗೆ ತಿಳಿಸಿದರು.

ವಿಕಾಸ ಸೌಧದಲ್ಲಿ ಇಂದು ಪತ್ರಿಕಾಗೋಷ್ಠಿನ್ನುದ್ದೇಶಿ ಮಾತನಾಡಿದ ಸಚಿವರು ಸರ್ಕಾರ ಎಲ್ಲರಿಗೂ ಉತ್ತಮ ಆರೋಗ್ಯ ಭಾಗ್ಯ ಒದಗಿಸಬೇಕೆಂಬ ದೃಢ ಸಂಕಲ್ಪದಿಂದ ಎ.ಪಿ.ಎಲ್. ಕಾರ್ಡ್ ಫಲಾನುಭವಿಗಳಿಗೆ ರಾಜೀವ್ ಆರೋಗ್ಯ ಭಾಗ್ಯ ಹಾಗೂ ರಾಜ್ಯ ಸರ್ಕಾರಿ ನೌಕರಿಗೆ ಜ್ಯೋತಿ ಸಂಜೀವಿನಿ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದೆ ಎಂದು ಪ್ರಕಟಿಸಿದರು.

ರಾಜೀವ್ ಆರೋಗ್ಯ ಭಾಗ್ಯ ಯೋಜನೆಯಡಿ ಚಿಕಿತ್ಸೆ ಪಡೆಯುವವರು ಶೇಕಡಾ 30 ರಷ್ಟು ಹಣ ಪಾವತಿಸಬೇಕಿದ್ದು ಉಳಿದ ಶೇಕಡಾ 70 ರಷ್ಟು ಹಣವನ್ನು ರಾಜ್ಯ ಸರ್ಕಾರಿ ಭರಿಸಲಿದೆ ಎಂದು ಸಚಿವರು ತಿಳಿಸಿದರು.

ಸರ್ಕಾರಿ ನೌಕರರು ಈವರೆಗೆ ಮರುಪಾವತಿ ಪದ್ಧತಿಯಲ್ಲಿ ವೈದ್ಯಕೀಯ ಚಿಕಿತ್ಸ ಪಡೆಯುತ್ತಿದ್ದು ಇನ್ನು ಮುಂದೆ ಆಘಾತಕಾರಿ ಖಾಯಿಲೆಗಳಿಗೆ ಸಂಬಂಧಿಸಿದಂತೆ ನಗದು ರಹಿತ ಚಿಕಿತ್ಸೆಯನ್ನು ಜ್ಯೋತಿ ಸಂಜೀವಿನಿ ಯೋಜನೆಯಲ್ಲಿ ಪಡೆಯಲಿದ್ದಾರೆಂದು ಸಚಿವರು ತಿಳಿಸಿದರು. ಪೊಲೀಸ್ ಇಲಾಖೆ ಸಿಬ್ಬಂದಿ ಹೊರತುಪಡಿಸಿ ರಾಜ್ಯದ ಇತರೆ ಎಲ್ಲ ಇಲಾಖೆಯ ನೌಕರರು ಈ ಸೌಲಭ್ಯ ಪಡೆಯಲು ಅರ್ಹರಾಗಿದ್ದಾರೆಂದು ಸಚಿವರು ತಿಳಿಸಿದರು.

ವಾಜಪೇಯಿ ಆರೋಗ್ಯಶ್ರೀ ಯೋಜನೆಯಡಿ ದುಬಾರಿ ವೆಚ್ಚದ ಖಾಯಿಲೆಗಳಾದ ಹೃದಯ ರೋಗ, ಕ್ಯಾನ್ಸರ್, ನರರೋಗ, ಮೂತ್ರ ಪಿಂಡದ ಖಾಯಿಲೆ, ಅಪಘಾತ, ಸುಟ್ಟಗಾಯ ಹಾಗೂ ನವಜಾತ ಶಿಶುಗಳು ಮತ್ತು ಮಕ್ಕಳಿಗೆ ಸಂಬಂಧಿಸಿದ ಖಾಯಿಲೆಗಳಿಗೆ ಬಡತನ ರೇಖೆಗಿಂತ ಕೆಳಗಿರುವ ಕಾರ್ಡುದಾರರಿಗೆ ಉಚಿತ ಚಿಕಿತ್ಸೆ ಒದಗಿಸಲಾಗುತ್ತಿದೆ ಎಂದು ಅವರು ಹೇಳಿದರು.

ಈವರೆಗೆ ವಾಜಪೇಯಿ ಆರೋಗ್ಯಶ್ರೀ ಯೋಜನೆಯಡಿ 84,573 ಫಲಾನುಭವಿಗಳು ಉಚಿತ ಚಿಕಿತ್ಸೆ ಪಡೆದಿದ್ದು 487.23 ಕೋಟಿ ರೂ.ಗಳ ವೆಚ್ಚ ಮಾಡಲಾಗಿದೆ ಎಂದು ತಿಳಿಸಿದರು.

ಜ್ಯೋತಿ ಸಂಜೀವಿನಿ ಯೋಜನೆಯಡಿ ಸುಮಾರು 449 ಬಗೆಯ ಶಸ್ತ್ರ ಚಿಕಿತ್ಸೆಗಳನ್ನು ಯೋಜನೆಯಡಿ ಗುರುತಿಸಲಾಗಿರುವ ನೋಂದಾಯಿತ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳ ಮೂಲಕ ಉಚಿತ ಚಿಕಿತ್ಸೆ ನೀಡಲಾಗುವುದು ಎಂದು ಇದೇ ಸಂದರ್ಭದಲ್ಲಿ ಪ್ರಕಟಿಸಿದರು. ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟಿನ ಕಾರ್ಯನಿರ್ವಾಹಕ ನಿರ್ದೇಶಕ ಶ್ರೀ ಪಿ. ಬೋರೇಗೌಡ ಅವರು ಉಪಸ್ಥಿತರಿದ್ದರು.

ಬಾಬು/ಕೆಪಿಪಿ/ಕೆಎಂ

## ಪ್ಲಾಸ್ಟಿಕ್ ರಾಷ್ಟ್ರಧ್ವಜ ನಿಷೇಧ

ಬೆಂಗಳೂರು, ಜನವರಿ 17 (ಕರ್ನಾಟಕ ವಾರ್ತೆ)

ಭಾರತದ ಧ್ವಜ ಸಂಹಿತೆ 2002 ರಲ್ಲಿನ ನಿಯಮಗಳನ್ವಯ ಉಣ್ಣೆ/ಹತ್ತಿ/ರೇಷ್ಮೆ ಬಟ್ಟೆಗಳಿಂದ ತಯಾರಿಸಲಾದ ರಾಷ್ಟ್ರಧ್ವಜವನ್ನು ಮಾತ್ರ ಬಳಸಬೇಕು. ಇತ್ತೀಚೆಗೆ ಸಾರ್ವಜನಿಕವಾಗಿ ಪ್ಲಾಸ್ಟಿಕ್‌ನಿಂದ ತಯಾರಿಸಲ್ಪಟ್ಟ ರಾಷ್ಟ್ರ ಧ್ವಜದ ಬಳಕೆಯಾಗುತ್ತಿರುವ ಹಿನ್ನೆಲೆಯಲ್ಲಿ ಸರ್ಕಾರವು ಸಾರ್ವಜನಿಕರು ಪ್ಲಾಸ್ಟಿಕ್ ಧ್ವಜ ಬಳಸುವುದನ್ನು ನಿಷೇದಿಸಿ ಆದೇಶ ಹೊರಡಿಸಿದೆ.

## ಮುಖ್ಯ ಸಚೇತಕರ ಪ್ರವಾಸ

ಬೆಂಗಳೂರು, ಜನವರಿ 17 (ಕರ್ನಾಟಕ ವಾರ್ತೆ)

ಕರ್ನಾಟಕ ವಿಧಾನ ಸಭೆಯ ಸರ್ಕಾರಿ ಮುಖ್ಯ ಸಚೇತಕ ಶ್ರೀ ಅಶೋಕ ಮಹದೇವಪ್ಪ ಪಟ್ಟಣ್ (ಶ್ರೀ ಪಿ.ಎಂ. ಅಶೋಕ್) ಅವರು ಜನವರಿ 18 ರಿಂದ 26 ರವರೆಗೆ ಬೆಳಗಾವಿ ಜಿಲ್ಲೆಯಲ್ಲಿ ಪ್ರವಾಸ ಮಾಡುವರು.

## ಸಚಿವರ ಪ್ರವಾಸ

ಬೆಂಗಳೂರು, ಜನವರಿ 17 (ಕರ್ನಾಟಕ ವಾರ್ತೆ)

ರಾಜ್ಯ ಪೌರಾಡಳಿತ ಅಲ್ಪಸಂಖ್ಯಾತ ಕಲ್ಯಾಣ ಹಾಗೂ ವಕ್ಫ್ ಸಚಿವ ಡಾ: ಖಮರುಲ್ ಇಸ್ಲಾಂ ಅವರು ಜನವರಿ 18 ರಿಂದ 20 ರವರೆಗೆ ಕಲಬುರಗಿ ಜಿಲ್ಲೆಯಲ್ಲಿ ಪ್ರವಾಸ ಮಾಡುವರು.